ಸೂಚಿಸುವಂತೆ ರಮಾ ಮಿತ್ರ–ರಾಮಮನೋಹರ ಲೋಹಿಯಾರ ಸಖ್ಯ ಪರಸ್ಪರ ಗೌರವ, ಸ್ವಾತಂತ್ರ್ಯಗಳ ಸಂಬಂಧವಾಗಿತ್ತು. 'ನೀನು ಬೆಳೆದರೆ ನಾನು ಬೆಳೆವೆ' ಎಂಬ ಕುವೆಂಪು ಬಣ್ಣನೆಯ ಇಂಗಿತಾರ್ಥಕ್ಕೆ ತಕ್ಕಂತಿತ್ತು. ಸ್ವಂತದ ಬಗ್ಗೆ ಹೆಚ್ಚು ಮಾತಾಡದ ಲೋಹಿಯಾರ ಒಳಲೋಕ ರಮಾಗೆ ಬರೆದ ಪತ್ರಗಳಲ್ಲಿ ಮೆಲ್ಲಗೆ ತೆರೆದುಕೊಳ್ಳುತ್ತದೆ.

ಗೆಳೆಯ ಅಥವಾ ಗೆಳತಿಯೊಂದಿಗೆ ಮನಬಿಚ್ಚಿ ಮಾತಾಡುವುದೆಂದರೆ ತನ್ನೊಳಗೆ ತಾನೇ ಮಾತಾಡಿಕೊಂಡಂತೆ! ಅಲ್ಲಿ ಎಲ್ಲವನ್ನೂ ಮಾತಾಡಿಕೊಳ್ಳಬಹುದು. ರಾಜಕೀಯ, ಪುಸ್ತಕ, ಸಮಾಜ, ಕಲೆ, ಸಾಹಿತ್ಯ, ಸೌಂದರ್ಯ, ವ್ಯಕ್ತಿ, ರಮ್ಯತೆ, ರಸಿಕತೆ... ಹೀಗೆ ಲೋಹಿಯಾ–ರಮಾ ಪತ್ರಸಂವಾದದಲ್ಲಿ ಎಲ್ಲವೂ ಸೈ! ಧೀಮಂತನೊಬ್ಬ ತನ್ನೊಳಗೆ ತಾನೇ ಮಾತಾಡಿಕೊಂಡಂಥ ಮುಕ್ತ ಬರವಣಿಗೆಯಲ್ಲಿ ತೆರೆದುಕೊಳ್ಳುವ ಮನೋಲೋಕ ಈ ಪತ್ರಗಳುದ್ದಕ್ಕೂ ಹರಡಿಕೊಂಡಿದೆ.

ಆಗಿನ ಮೈಸೂರು ರಾಜ್ಯದಲ್ಲಿ ಅಡ್ಡಾಡುತ್ತಾ ಲೋಹಿಯಾ ಬರೆಯುತ್ತಾರೆ:

ಡಿಯರ್ ರಮಾ,

ನನಗೆ ನೀಲಿ ಮತ್ತು ಬಿಳಿ ಬಣ್ಣ ತುಂಬಾ ಹಿತವೆನಿಸುತ್ತವೆ; ಬಹುಶಃ ಆಕಾಶ ಬಿಳಿ ಆಗಿರುವುದರಿಂದ ಇರಬೇಕು. ಆಕಾಶದಲ್ಲಿ ಈ ಎರಡು ಬಣ್ಣಗಳೇ ವಿಶೇಷ. ಒಂದು ಪ್ರದರ್ಶನದಲ್ಲಿ ಹೂವುಗಳನ್ನು ಕಂಡು ಅದ್ಭುತವೆನಿಸಿತು. ಇದು ನಮ್ಮ ದೇಶದ ತುಂಬಾ ಸಾಧಾರಣ ಹೂವು; ಎಲ್ಲಾ ಕಡೆಯಲ್ಲಿ ತುಂಬಾ ಅರಳುತ್ತದೆ. ಅಬ್ಬಾ ಬಣ್ಣದ ಮಹಿಮೆಯೇ! ಬಣ್ಣ ಬೆಂಕಿಯಂತೆ ಎಲ್ಲೆಡೆಗೂ ಹರಡಿಕೊಳ್ಳುತ್ತದೆ. ವಾಸನೆಯೂ ಪರವಾಗಿಲ್ಲ. ರೂಪ, ಬಣ್ಣ ಮತ್ತು ವಾಸನೆಗಳನ್ನು ಬೇರೆ ಬೇರೆಯಾಗಿ ಹುಡುಕಿ ನೋಡಿದರೆ ಇತರ ಒಳ್ಳೆಯ ಹೂವುಗಳು ಸಿಕ್ಕಿದರೂ ಸಿಕ್ಕಬಹುದು; ಆದರೆ ಇಷ್ಟೊಂದು ಹೂಗಳು ಒಟ್ಟಿಗೆ ಸಿಕ್ಕುತ್ತವೆಯೆ? ತುಂಬಾ ಸಿಕ್ಕುವ ವಸ್ತುವಿನ ಮಾನ್ಯತೆಯೂ ತಾನಾಗೇ ಕಡಿಮೆಯಾಗುತ್ತದೆಂದು ನನಗನ್ನಿಸುತ್ತದೆ.

ಜೋಗ್ ಜಲಪಾತದಲ್ಲಿ ಪ್ರಾಯಶಃ ದಿನವಿಡೀ ಕಾಮನಬಿಲ್ಲಿನ ಬಣ್ಣ ಕಾಣಸಿಗುತ್ತದೆ. ಬೃಂದಾವನದ ಹೂದೋಟದಲ್ಲಿ ಬಣ್ಣಗಳ ಬಾಲಲೀಲೆ ಇದೆ. ತುಂಬು ಬಣ್ಣ, ತುಂಬು ಮೆರುಗು.

ಮೈಸೂರು ರಾಜ್ಯ ನಮ್ಮ ದೇಶದ ಎಲ್ಲ ನಾಡುಗಳಿಗಿಂತ ಹೆಚ್ಚು ಸುಂದರ ಪ್ರದೇಶ ಎಂದು ನನ್ನ ಅಭಿಪ್ರಾಯ. ಇದನ್ನು ಪುಷ್ಟೀಕರಿಸಲು ಮುಂದಾದಾಗ ಸೌಂದರ್ಯ ಕೈಯಿಂದ ಜಾರಿಹೋಯಿತು.

ನಿನ್ನ
ರಾಮಮನೋಹರ್

ಲೋಹಿಯಾ ಪ್ರತಿ ದಿನದ ಕೊನೆಯಲ್ಲಿ ತಮಗೊಂದು ಪತ್ರ ಬರೆಯಬೇಕೆಂಬುದು ರಮಾ ಬಯಕೆ; ತಾನು ಬರೆದ ಪತ್ರಕ್ಕೆ ಬೇಗ ಉತ್ತರ ಬರಲಿಲ್ಲವೆಂದು ಲೋಹಿಯಾ ಮುನಿಸು; ಈ ನಡುವೆ ರಾಜಕಾರಣ, ಮನುಷ್ಯರ ವರ್ತನೆ, ಸೋಲು ಹಾಗೂ ಅಪರೂಪದ ಗೆಲುವು, ಮುಂದಿನ ಯೋಜನೆ, ಆತ್ಮಾವಲೋಕನ... ಹೀಗೆ ಲೋಹಿಯಾರ ನಿತ್ಯದ ವಿವರಗಳು ಈ ಪತ್ರಗಳಲ್ಲಿವೆ.

ಕಳೆದ ಸಂಚಿಕೆಯಲ್ಲಿ ಕಂಡಂತೆ, 1957ರಲ್ಲಿ ಲೋಹಿಯಾ–ರಮಾ ಮಿತ್ರ ಇಬ್ಬರೂ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿದ್ದರು. ಸೋತು ಸುಣ್ಣವಾಗಿದ್ದ ಸಂಗಾತಿಗಳಿಗೆ ಲೋಹಿಯಾ ಹೇಳಿದರು:

'ಸೋಲಿನ ನಂತರದ ಮಾನಸಿಕ ಯಾತನೆ ಅನಿವಾರ್ಯ. ನೀತಿ ತತ್ವಗಳಿಗೆ ಅಂಟಿಕೊಳ್ಳುವ ಪಕ್ಷ ಕೆಲವೊಮ್ಮೆ ಸೋಲಬಹುದು; ಆದರೆ ಒಂದಲ್ಲ ಒಂದು ದಿನ ಅದು ಜಯಶಾಲಿಯಾಗಿಯೇ ಆಗುತ್ತದೆ.'

ಸೋತು ಸುಮ್ಮನೆ ಕೂತರೆ ಮತ್ತೆ ಮೇಲೇಳಲಾಗದು! ಫಲಿತಾಂಶ ಬಂದ ತಕ್ಷಣ ಲೋಹಿಯಾ ಬನಾರಸ್, ಮಥುರಾ ಕಡೆಯ ಸಭೆಗಳಿಗೆ ಹೊರಟರು. ಈ ಪಯಣದಲ್ಲಿ ಕೃಷ್ಣನ ಜಾಡುಗಳ ಬಗ್ಗೆ ಲೋಹಿಯಾರಲ್ಲಿ ಸಂಶೋಧಕ ಕುತೂಹಲ ಮೊಳೆಯಿತು. ಅವರ ಮನದಲ್ಲಿ ಆರಂಭವಾದ ಈ ಸಾಂಸ್ಕೃತಿಕ ಪಯಣ ಅವರ ಸಾಂಸ್ಕೃತಿಕ ಚಿಂತನೆಯನ್ನೂ, ರಾಜಕೀಯ ಚಿಂತನೆಯನ್ನೂ ಮತ್ತೊಂದು ನೆಲೆಗೆ ಒಯ್ದಿತು.

ಕೃಷ್ಣ ಬಳಸುತ್ತಿದ್ದ ಮಥುರಾ, ಬೃಂದಾವನಗಳ ಮಾರ್ಗಗಳನ್ನು ಕಲ್ಪನೆಯ ಮೂಲಕ ಹಾಗೂ ನಿಖರವಾಗಿ ಪತ್ತೆ ಹಚ್ಚಲು ನೆರವಾಗಲೆಂದು ರಮಾ ಮಿತ್ರರನ್ನು ವಾರಣಾಸಿಗೆ ಬರಲು ಲೋಹಿಯಾ ಕರೆಯುತ್ತಾರೆ. ಇತಿಹಾಸ ಕ್ಷೇತ್ರದಲ್ಲಿನ ರಮಾ ಜ್ಞಾನ ಹಾಗೂ ರಮಾ ಸಖ್ಯ... ಎರಡರ ಹಂಬಲವೂ ಈ ಕರೆಯಲ್ಲಿ ಅಡಗಿತ್ತು!

ನಂತರ ಲೋಹಿಯಾ ಬರೆದ 'ಕೃಷ್ಣ' ಎಂಬ ಹಿಂದಿ ಲೇಖನದ ನಿರೂಪಣಾ ಶೈಲಿಯನ್ನು ನೋಡಿದರೆ, ಇಡೀ ಕಥನ ರಮಾ ಜೊತೆ ಲೋಹಿಯಾ ಆತ್ಮೀಯವಾಗಿ ಮಾತಾಡುತ್ತಾಲೇ ಮೈದಾಳಿದಂತೆ ಕಾಣುತ್ತದೆ:

'ಕೃಷ್ಣನಿಗೆ ಸಂಬಂಧಿಸಿದ ಎಲ್ಲವೂ ಎರಡೆರಡು: ಇಬ್ಬರು ಅಮ್ಮಂದಿರು, ಇಬ್ಬರು ಅಪ್ಪಂದಿರು, ಎರಡು ಊರುಗಳು, ಇಬ್ಬರು ಪ್ರಿಯತಮೆಯರು... ಹೀಗೆ ಇನ್ನೂ ಅನೇಕವನ್ನು ಹೇಳುತ್ತಾ ಹೋಗಬಹುದು... ಕೃಷ್ಣ ದೇವಕೀನಂದನ, ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಯಶೋದಾನಂದನ. ವಸುದೇವ, ನಂದಗೋಪ ಅವನ ತಂದೆಯರು; ಅವನ ಊರುಗಳು ಮಥುರಾ, ದ್ವಾರಕಾ...'

ಕೃಷ್ಣನಿಗೆ ಎಲ್ಲವೂ ಎರಡೆರಡು ಎಂದು ತೋರಿಸುತ್ತಾ ಸಾಗುತ್ತಿದ್ದ ಲೋಹಿಯಾ ಕಥನ ಕೃಷ್ಣನ ಸಖಿಯರ ಅಂಗಳಕ್ಕೆ ಬಂದು, ಚಣ ನಾಚಿ ನಿಂತು, ತಡವರಿಸುತ್ತಾ ಮುಂದೆ ಸಾಗುತ್ತದೆ:

'ಪ್ರಿಯತಮೆಯರ ಪ್ರಶ್ನೆ ಸ್ವಲ್ಪ ಪೇಚಿನದು; ಯಾರನ್ನು ಯಾರೊಡನೆ ಹೋಲಿಸುವುದು – ರುಕ್ಮಿಣಿಯನ್ನು ಸತ್ಯಭಾಮಳ ಜೊತೆಗೆ? ರಾಧೆಯನ್ನು ರುಕ್ಮಿಣಿಯ ಜೊತೆಗೆ? ಅಥವಾ ರಾಧೆಯನ್ನು ದ್ರೌಪದಿಯ ಜೊತೆಗೆ?'

'ಪ್ರಿಯತಮೆ' ಎಂಬ ಪದ ಬಳಸಿದ ತಕ್ಷಣ ಲೋಹಿಯಾ ಕೊಂಚ ಜಾಗರೂಕರಾಗುತ್ತಾರೆ! 'ಪ್ರಿಯತಮೆ ಎಂಬ ಶಬ್ದದ ಅರ್ಥವನ್ನು ಸಂಕುಚಿತವಾಗಿಸದೆ, ಆ ಶಬ್ದದಲ್ಲಿರುವ ಸಖಿ, ಸಖಿ ಭಾವವನ್ನು ಅರಿಯಬೇಕು' ಎನ್ನುತ್ತಾರೆ; 'ಈಚೆಗಂತೂ ಮೀರಾ ಕೂಡ ಈ ಸ್ಪರ್ಧೆಯಲ್ಲಿ ಸೇರಿಕೊಳ್ಳಲು ಶುರುಮಾಡಿದ್ದಾಳೆ' ಎಂಬುದನ್ನೂ ಗಮನಿಸುತ್ತಾರೆ!

ಲೋಹಿಯಾ ಬಣ್ಣನೆಯಲ್ಲಿ ಕೃಷ್ಣ ಅವರ ಸಮಕಾಲೀನ ಮನುಷ್ಯನಾಗುತ್ತಾನೆ:

'ಕೃಷ್ಣ ಎಂಥ ದೇವತೆ ಎಂದರೆ ಅವನು ಮನುಷ್ಯನಾಗುವ ಪ್ರಯತ್ನವನ್ನು ಎಡೆಬಿಡದೆ ಮಾಡುತ್ತಲೇ ಇದ್ದ. ಅದರಲ್ಲಿ ಅವನಿಗೆ ಪೂರ್ಣ ಯಶಸ್ಸು ದೊರೆಯಿತು. ಕೃಷ್ಣ ಪೂರ್ಣನೆನಿಸಿದ. ಈ ಮನುಷ್ಯ ಮನದುಂಬುವಂತೆ ಪ್ರೀತಿಸಿದ; ಪ್ರೀತಿಸುವುದು ಹೇಗೆಂದು ಹೇಳಿಕೊಟ್ಟ; ಜನತೆಯನ್ನು ರಕ್ಷಿಸಿದ; ಜನರಿಗೆ ದಾರಿ ತೋರಿದ; ನಿರ್ಲಿಪ್ತ ಭೋಗದ ಮಹಾತ್ಯಾಗಿಯೆನಿಸಿದ; ಯೋಗಿಯೆನಿಸಿಕೊಂಡ.

... ಪೂರ್ಣ ಭೋಗ, ಪೂರ್ಣ ಪ್ರೇಮ, ಪೂರ್ಣ ರಕ್ಷಣೆ... ಕೃಷ್ಣನ ಎಲ್ಲ ಕೆಲಸಗಳಲ್ಲೂ ಅವನ ಪೂರ್ಣ ಶಕ್ತಿ ವಿನಿಯೋಗವಾಗುತ್ತಿತ್ತು. ಶಕ್ತಿಯ ಯಾವೊಂದು ಸಣ್ಣ ಭಾಗವನ್ನೂ ಕೃಷ್ಣ ಉಳಿಸಿ ಇಟ್ಟುಕೊಳ್ಳುತ್ತಿರಲಿಲ್ಲ; ಒಂಚೂರೂ ಜಿಪುಣತನ ತೋರುತ್ತಿರಲಿಲ್ಲ. ಮನ ಬಿಚ್ಚಿ, ಶರೀರದ ಸರ್ವಶಕ್ತಿಯನ್ನೂ ಬಳಸಿ ಕೆಲಸ ಮಾಡುತ್ತಿದ್ದ. ಇದು ಮನುಷ್ಯರಿಗೆ ಅಸಾಧ್ಯ ಎನ್ನಿಸಬಹುದು. ಆದರೆ ಮನುಷ್ಯ ಮಾತ್ರ ಹೀಗೆ ಮಾಡಬಲ್ಲ... ಇಂಥ ಮನುಷ್ಯನನ್ನು ಆಮೆಗೆ ಹೋಲಿಸುವುದುಂಟು. ಇಂಥ ಮನುಷ್ಯ ಆಮೆಯಂತೆ ತನ್ನ ಎಲ್ಲ ಅಂಗಗಳನ್ನು ಒಟ್ಟು ಸೇರಿಸುತ್ತಾನೆ.'

ಕೃಷ್ಣನೆದುರು ರಾಮನ ಹೋಲಿಕೆಯೂ ಲೋಹಿಯಾಗೆ ಹೊಳೆಯುತ್ತದೆ: 'ರಾಮ ಎಂತಹ ಮನುಷ್ಯನೆಂದರೆ, ಅವನು ನಿರಂತರವಾಗಿ ದೇವತೆಯಾಗುವ ಪ್ರಯತ್ನವನ್ನು ಮಾಡುತ್ತಲೇ ಇದ್ದ. ಆದ್ದರಿಂದ ಅವನಲ್ಲಿ ಆಕಾಶದ ದೇವತೆಗಳ ಅಂಶ ಸ್ವಲ್ಪ ಹೆಚ್ಚಾಗಿಯೇ ಇದೆ.'

ಆದರೂ ಲೋಹಿಯಾಗೆ ತಮ್ಮ ಕಾಲದ ರಾಜಕಾರಣಕ್ಕೆ ಕೃಷ್ಣನ ಹಾದಿಯೇ ಸೂಕ್ತ ಎನ್ನಿಸತೊಡಗುತ್ತದೆ:

'ನೀವು ಏನೇ ಕೆಲಸ ಮಾಡಿದರೂ ಪಟ್ಟುಹಿಡಿದು ಮಾಡಿ; ನಿಮ್ಮ ಮೈಮನಸ್ಸುಗಳನ್ನು ಅದರಲ್ಲಿ ಪೂರ್ತಿಯಾಗಿ ತೊಡಗಿಸಿಕೊಂಡು ಮಾಡಿ ಎಂದು ಕೃಷ್ಣನ ಬದುಕು ಸೂಚಿಸುತ್ತದೆ... ಮನುಷ್ಯ ತನ್ನನ್ನು ತಾನು ಬೇರೆಯವರಿಗೆ ಸಮರ್ಪಣೆ ಮಾಡಿಕೊಳ್ಳುವ ಅಗತ್ಯವೇನಿಲ್ಲ. ತನ್ನ ಕೆಲಸಕಾರ್ಯಗಳಲ್ಲಿ ಆತ್ಮ ಸಮರ್ಪಣೆ ಮಾಡಿಕೊಂಡರೆ ಸಾಕು. ಕಸ ಗುಡಿಸಬೇಕಾದರೂ ಕೈ ಜೊತೆಗೆ ಎಲ್ಲ ಇಂದ್ರಿಯಗಳನ್ನೂ ಒಗ್ಗೂಡಿಸಿ ಕೆಲಸ ಮಾಡಬೇಕು. ರಣಭೂಮಿಯಲ್ಲಿ ರಥ ನಡೆಸಬೇಕಾದರೂ ಭರ್ಜರಿಯಾಗಿ ನಡೆಸಬೇಕು... ಕೃಷ್ಣ ಏನೇ ಕೆಲಸ ಮಾಡಲಿ, ಅದರಲ್ಲಿ ತನ್ನ ಎಲ್ಲಾ ಅಂಗಗಳನ್ನು ಬಳಸಿ ಏಕಾಗ್ರಚಿತ್ತದಿಂದ ಕೆಲಸ ಮಾಡುತ್ತಿದ್ದ... ತನ್ನದೆಂಬುದೇನೂ ಇಲ್ಲವೆಂಬಂತೆ ಇದ್ದುಬಿಡುತ್ತಿದ್ದ...'

ಲೋಹಿಯಾ ಜೀವನಯಾನ ಓದುತ್ತಿರುವ ಜಾಣ, ಜಾಣೆಯರಿಗೆ ಲೋಹಿಯಾ ಕೃಷ್ಣನ